# ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1206/2015

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಡಾ. ರಾಮಚಂದ್ರಚಾರ್ | CW: 10 | PW: 9 |
| ತಂದೆಯ ಹೆಸರು | : | ತಿಪ್ಪೇಸ್ವಾಮಿ | | |
| ವಯಸ್ಸು | : | 42 | | |
| ವೃತ್ತಿ | : | ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳು | | |
| ವಾಸಸ್ಥಳ | : | ಶಿವಮೊಗ್ಗ | | |

ದಿನಾಂಕಃ 13.03.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಸಾಕ್ಷಿಯ ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ತೆಗೆದುಕೊಳ್ಳಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ-

ನಾನು 2012 ರಿಂದ ಇಲ್ಲಿಯವರೆಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 27.07.2015 ರಂದು ರಾತ್ರಿ 9.41 ಗಂಟೆಗೆ ಚಾಸಾ-7 ರವರು ಹಲ್ಲೆಯ ಇತಿಹಾಸದಲ್ಲಿ ಚಿಕಿತ್ಸೆ ಪಡೆಯಲು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಬಂದಿದ್ದು, ನಾನು ಅವರನ್ನು ಪರೀಕ್ಷಿಸಿದಾಗ ಅವರಿಗೆ ಈ ಕೆಳಕಂಡ ಗಾಯಗಳಾಗಿದ್ದವು.

1. ಬಲಕಣ್ಣಿನ ಕೆಳಭಾಗದಲ್ಲಿ 1x 0.5 ಸೆ. ಮೀ ಹರಿತ ಗಾಯ.

ಸದರಿ ಗಾಯ ಸಾಮಾನ್ಯ ಸ್ವರೂಪದ ಗಾಯ ಎಂದು ಅಭಿಪ್ರಾಯಪಟ್ಟಿರುತ್ತೇನೆ. ಈ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ಸಾಕ್ಷಿಯು ನಿಪಿ 7 ಗಾಯದ ಪ್ರಮಾಣ ಪತ್ರವನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–7(ಬಿ) ಎಂದು ಗುರುತಿಸಲಾಯಿತು.

ಮು.ಮಾ 1 ರಿಂದ ಹೊಡೆದರೆ ಸದರಿ ಗಾಯ ಆಗುವ ಸಾಧ್ಯತೆ ಇರುತ್ತದೆ.

ಪಾಟೀ ಸವಾಲು:– ಆರೋಪಿ ಪರ ಶ್ರೀ.ಎಂ ಆರ್ ಎಂ ವಕೀಲರಿಂದ:–

ಗಾಯವನ್ನು ನೋಡಿದಾಗ ಇಂತದ್ದೆ ವಸ್ತುವಿನಿಂದ ಗಾಯ ಆಗಿರುತ್ತದೆ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ. ವ್ಯಕ್ತಿ ಗಟ್ಟಿ ನೆಲದ ಮೇಲೆ ಕೆಳಗೆ ಬಿದ್ದಾಗ ನಿಪಿ 7 ರಲ್ಲಿ ಕಾಣಿಸುವ ಗಾಯ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಚಾಸಾ 7 ರವರ ಕೋರಿಕೆಯ ಮೇರೆಗೆ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 7 ರವರು ಹಲ್ಲೆಯಿಂದ ಗಾಯ ಆಗಿರುತ್ತದೆ ಎಂದು ಹೇಳಿದ್ದು ನಿಜವೋ ಸುಳ್ಳೋ ನನಗೆ ಗೊತ್ತಾಗುವುದಿಲ್ಲ ಎಂದರೆ ಸರಿ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.